

ಪತ್ನಿ ಯಶೋದಾ ಜೊತೆ ಕೆ.ಟಿ. ಗಟ್ಟಿ

ಮಕ್ಕಳು, ಪೋಷಕರು, ಮತ್ತು ಶಿಕ್ಷಕರು – ಈ ಮೂರು ನೆಲೆಗಳಿಂದಲೂ ನೋಡಿ ಪ್ರತಿಪಾದಿಸಿದ್ದರು.

'ಗುರುಗಳಾಗಿ ತಾಯಿತಂದೆ', 'ಉತ್ಕೃಷ್ಟತೆಗಾಗಿ ತಾಯಿತಂದೆ' – ಅವರ ಈ ಕೃತಿಗಳು ಕನ್ನಡದಲ್ಲಿಯೇ ವಿಶಿಷ್ಟವಾಗಿವೆ. ಅವರು ತಮ್ಮ ಬರಹಗಳಲ್ಲಿ ಭಾಷಣಗಳಲ್ಲಿ ಈ ಕುರಿತಾದ ಅನುಭವದ ಆಧಾರದಲ್ಲಿ ಮಾಡುವ ವಿವೇಚನೆ, ವಿಶ್ಲೇಷಣೆ ಸೃಜನಶೀಲವಾಗಿಯೂ ಗೆಲ್ಲುತ್ತದೆ. 'ಇಂಗ್ಲಿಷ್ ಮೂಲಕ ಕನ್ನಡ ಕಲಿಕೆ', 'ಕನ್ನಡದ ಮೂಲಕ ಇಂಗ್ಲಿಷ್ ಕಲಿಕೆ' ಮುಂತಾದ ಕೃತಿಗಳನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಆಂಗ್ಲ ಸಾಹಿತ್ಯದ ವಿಪುಲವಾದ ಓದು ಅವರ ಸಾಮಾಜಿಕ ಚಿಂತನೆಯನ್ನೂ ಸಾಹಿತ್ಯ ಚಿಂತನೆಯನ್ನೂ ಬಹಳ ಮಟ್ಟಿಗೆ ರೂಪಿಸಿವೆ. ಶಿವರಾಮ ಕಾರಂತರಂತೆಯೇ ಮನುಷ್ಯರ ಸಮಸ್ಯೆಗಳನ್ನು ಕೇವಲ ಭಾರತೀಯ ಎಂಬ ನೆಲೆಯಲ್ಲಿ ನೋಡದೆ ಒಟ್ಟು ಮನುಕುಲದ ಪರಿಪ್ರೇಕ್ಷ್ಯದಲ್ಲಿಟ್ಟು ವಿವೇಚಿಸುವವರಾಗಿದ್ದರು ಅವರು.

ಎಂಟನೆಯ ತರಗತಿಯ ಬಳಿಕ ಮಾಯಿಪ್ಪಾಡಿಯ ಬೇಸಿಕ್ ಟ್ರೈನಿಂಗ್ ಶಾಲೆಯಲ್ಲಿ ತರಬೇತಿಯನ್ನು ಪಡೆದು ಶಿಕ್ಷಕ ಹುದ್ದೆಗೆ ಅರ್ಹತೆಯನ್ನು ಪಡೆದಾಗ, ಗಟ್ಟಿಯವರಿಗೆ ಇನ್ನೂ ಹದಿನೇಳು ವರ್ಷ. ಮುಂದೆ ತಮ್ಮ ವಿದ್ಯಾರ್ಹತೆಯನ್ನು ನಿರಂತರವಾಗಿ ಹೆಚ್ಚಿಸಿಕೊಂಡರು. ಖಾಸಗಿಯಾಗಿ ಕುಳಿತು ಕೇರಳ ವಿಶ್ವವಿದ್ಯಾಲಯದಿಂದ ಇಂಗ್ಲಿಷ್ ಸ್ನಾತಕೋತ್ತರ ಪದವಿ ಪಡೆದರು. 1968ರಲ್ಲಿ ಮಣಿಪಾಲದ ಎಂ.ಐ.ಟಿ. ಸಂಸ್ಥೆ ಸೇರಿ ಆರು ವರ್ಷಗಳ ಕಾಲ ಇಂಗ್ಲಿಷ್ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದರು. ಜೊತೆಗೆ ಒಂದು ವರ್ಷ ಉಡುಪಿಯ ಟಿ.ಎಂ.ಎ. ಪೈ ಶಿಕ್ಷಣ ಮಹಾವಿದ್ಯಾಲಯದಲ್ಲೂ ಅಧ್ಯಾಪಕರಾಗಿದ್ದರು. ಭಾರತ ಸರಕಾರದಿಂದ ಪ್ರಾಧ್ಯಾಪಕರಾಗಿ ನಿಯುಕ್ತರಾಗಿ ಇಥಿಯೋಪಿಯಾದಲ್ಲಿರುವಾಗಲೇ ಲಂಡನ್ನಿನ ಟ್ರಿನಿಟಿ ಕಾಲೇಜಿನಿಂದ ಇಂಗ್ಲಿಷ್ ಕಲಿಕೆಯಲ್ಲಿ ಡಿಪ್ಲೊಮ ಮತ್ತು ಆಕ್ಸ್‌ಫರ್ಡ್‌ನ ಕಾಲೇಜ್ ಆಫ್ ಪ್ರಿಸೆಪ್ಟರ್ಸ್‌ನಿಂದ ಡಿಪ್ಲೊಮ ಪಡೆದರು. ಹೀಗೆ ಕಾಸರಗೋಡು ಎಂಬ ಗಡಿನಾಡಿನಲ್ಲಿ ನೆಲೆ ನಿಂತರೂ ಅವರ ನೋಟ ಜಗತ್ತಿನಾದ್ಯಂತ ವಿಸ್ತರಿಸಿಕೊಂಡಿತ್ತು. ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡವರು.